ಚಂದ್ರಕುಮಾರ್ ಡಿ, ಬೆಂಗಳೂರು

ಗೆಳೆಯನೊಬ್ಬ ಸುಂದರಿಯರನ್ನು ನೋಡಿದಾಕ್ಷಣ 'ಒಲವಿನ ಉಡುಗೊರೆ ಕೊಡಲೇನು?' ಎನ್ನುವನಲ್ಲಾ?



ತಿಳಿಯಿತು. ಅವನು ಕೆಂಪು ಗುಲಾಬಿ ಮಾರುವವನು.

ಪಿ. ಗೋವಿಂದರಾಜ್, ಶಿವಮೊಗ್ಗ

ಚಿಂತೆಯಿಂದ ಚಿತೆ ಉತ್ಪತ್ತಿ ಆಗುವುದಂತೆ. ನಿಜವಾ?

ಅದು ಹೇಡಿಗಳ ಬಾಬ್ತು. ಧೀರರಿಗೆ ಚಿಂತೆಯು ಹೊಸ ಸಂಶೋಧನೆಗೆ ಪ್ರೇರಕ.

ಗಂಗಾದೇವಿ, ಬೆಂಗಳೂರು

ಖಾಸಗಿ ಆಸ್ಪತ್ರೆಗಳಲ್ಲಿ ಗಣಪತಿಯನ್ನು ಪೂಜಿಸುತ್ತಾರಲ್ಲಾ?

ಮೇಜರ್ ಸರ್ಜರಿಯಾಗಿಯೂ ಸ್ವಸ್ಥವಾಗಿರುವ ದೇವನಂತೆ ಅಲ್ಲಿ ಚಿಕಿತ್ಸೆ ಪಡೆದವರೂ ಆಗಲೆಂಬ ಆಶಯವಂತೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಇಲಿಯನ್ನು ತಿನ್ನುವ ಬೆಕ್ಕಿಗೇಕೆ 'ಇಲಿಜ್ವರ' ಬರುವುದಿಲ್ಲ?



ಬೆಕ್ಕನ್ನು ಕಂಡ ಇಲಿಯು ಬೆವರಿದ ಕಾರಣ ಜ್ವರ ಬಿಟ್ಟುಬಿಟ್ಟಿರುತ್ತದಂತೆ.

ಬಿ. ಚಂದ್ರೇಗೌಡ, ಬೆಂಗಳೂರು

ಮೀನ್ ಮೆಂಟಾಲಿಟಿ ಎಂದರೇನು?

ಮನ ಬಂದಂತೆ ಆಡಿ, ಹಿಡಿಯಲು ಹೋದರೆ ನುಣುಚಿಕೊಳ್ಳುವುದು.

ಮಹಾವೀರ ಕಾಸರ, ಶಿವಮೊಗ್ಗ

ಕೆಲವರ ಮನೆಯಲ್ಲಿ ನಾಯಿ ಇಲ್ಲದಿದ್ದರೂ 'ನಾಯಿ ಇದೆ ಎಚ್ಚರಿಕೆ' ಫಲಕವಿರತ್ತಲ್ಲ?

'ನಿನ್ನ ನಾಮದ ಬಲ ಒಂದಿದ್ದರೆ ಸಾಕು' ಎಂಬುದನ್ನು ಹೀಗೆ ಅರ್ಥ ಮಾಡಿಕೊಂಡಿರುವರಂತೆ.

ಮುರಲೀಧರ ಕುಲಕರ್ಣಿ, ಬೀದರ್

ಕಾಲಾಯ ತಸ್ಮೈ ನಮಃ ಎಂದರೇನು?

ಕಾಲಾಯ= 25% ಆದಾಯವನ್ನು ತಸ್ಮೈ (ತೆರಿಗೆ ಇಲಾಖೆಯೆ) ನಿನಗೆ ನೀಡಿ, ನಮಿಸುತ್ತೇನೆ ಎಂದರ್ಥ.

ಜೀವಿ, ಗೊಂಡೇದಹಳ್ಳಿ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹುಡುಗರು ಮುಂದೆ ಇರುತ್ತಾರಲ್ಲ?

ಸರಿಯೇ. '4ರಲ್ಲಿ ಒಂದು ಆರಿಸು' ಎಂದರೆ (ಡ್ರೆಸ್ಸಾಗಲಿ, ಉತ್ತರವಾಗಲಿ) ಹುಡುಗಿಗೆ ಕಷ್ಟ.

ಬಾ.ರಂ. ಸುರೇಶ್, ಶಿವಮೊಗ್ಗ

ನನ್ನ ಖಾತೆಗೆ 15 ಲಕ್ಷ ಜಮಾ ಆದಂತೆ ಕನಸು ಬಿತ್ತು. ಅದು ನಿಜವಾಗಬಹುದೆ?

ಕಟ್ಟಬೇಕಾದ್ದಕ್ಕಿಂತ 15 ಲಕ್ಷ ಹೆಚ್ಚು ತೆರಿಗೆ ಪಾವತಿ ಮಾಡಿದರೆ ನಿಶ್ಚಿತವಾಗಿ ನಿಜವಾಗುತ್ತದೆ.

ಬಿ. ಬಸವರಾಜ್, ಹರಿಹರ

ಮುಂದಿನ ಜನ್ಮದಲ್ಲಿ ನಾನು ಸತಿಯಾಗುವೆ, ನೀನು ಪತಿಯಾಗು ಎಂದರೆ ನನ್ನಾಕೆ ಒಪ್ಪುತ್ತಿಲ್ಲವಲ್ಲ?

ಜನ್ಮ ಯಾವುದಾದರೂ ಮೇಲುಗೈ ತನ್ನದೇ ಇರಲೆಂದು!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ನೀರು ಆರಿಸುತ್ತದೆ. ಬೆಂಕಿ ಉರಿಸುತ್ತದೆ. ರಾಜಕೀಯ?

ನಾವು ಅವರನ್ನು ಆರಿಸುತ್ತೇವೆ. ಅವರು ನಮ್ಮ ಹೊಟ್ಟೆ ಉರಿಸುತ್ತಾರೆ.

ಫಾಲನೇತ್ರ ಸಜ್ಜನ, ಶಿರಸಿ

ಜನತೆಗೂ, ಕೇಂದ್ರಕ್ಕೂ ಮಧ್ಯೆ ರಾಜ್ಯ ಸರಕಾರ ಬಂದರೆ ಯಾವ ಗ್ರಹಣ?

ಸರ್ಕಾರಗಳ ನಡುವಿನ ಜುಟ್ಟಾಜುಟ್ಟಿ warಶಿಖಾ ಪರಿಹಾರಹಣ ಗ್ರಹಣ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಹುಟ್ಟಿದಾಗ ಹಾಕುವ ಬಟ್ಟೆಗೂ, ಸತ್ತಾಗ ಹಾಕುವ ಬಟ್ಟೆಗೂ ಜೇಬು ಇರುವುದಿಲ್ಲ. ಯಾಕೆ?

ಹುಟ್ಟಿದಾಗ ಇಟ್ಟುಕೊಳ್ಳಲು ಏನೂ ಇರುವುದಿಲ್ಲ; ಸತ್ತಾಗ ಇಟ್ಟುಕೊಳ್ಳಲು ಏನನ್ನೂ ಉಳಿಸಿರುವುದಿಲ್ಲ.

## ಬಹುಮಾನಿತ ಪ್ರಶ್ನೆ

ರಾಜೀವ ಎನ್. ಮಾಗಲ್, ಸಕಲೇಶಪುರ

ಅಂತರರಾಷ್ಟ್ರೀಯ ಸುಳ್ಳು ಹೇಳುವ ಸ್ಪರ್ಧೆ ಏರ್ಪಡಿಸಿದರೆ ಯಾರು ಗೆಲ್ಲಬಹುದು?

ಯುದ್ಧ ಸಾರಿ, 'ನಾನು ಶಾಂತಿಪ್ರಿಯ' ಎಂದ ಟ್ರಂಪಣ್ಣ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಮಾನವನಿಗೆ ಅತ್ಯಂತ ಬೇಕು ಮತ್ತು ಬೇಡವಾದ ವಸ್ತು ಯಾವುದು?

ಅರಿವು, ಮರೆವು.

ಬಿ. ನಾಗರಾಜು, ಬೆಂಗಳೂರು

ಇಬ್ಬರ ಜಗಳದಲ್ಲಿ ಮೂರನೆಯವರಿಗೆ ಲಾಭ ಎಂದರೇನು?

ಜಗಳದ ತೀರ್ಮಾನಕ್ಕೆ ದುಬಾರಿ ಫೀಸಿನ ಮಧ್ಯಸ್ಥ ಇದ್ದಾನೆಂದು.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಮಡದಿಗೆ ಚಿನ್ನ ಕೊಡಿಸಿದ್ದಕ್ಕೆ ಚಿನ್ನದಂತಹ ಮನಸ್ಸು ನಿಮ್ಮದು ಎನ್ನುತ್ತಿದ್ದಾಳಲ್ಲ?



ಗುಡ್! ಮೊನ್ನೆ ನೀವು ಮಂಕಿ ಬ್ರ್ಯಾಂಡ್ ಪೊರಕೆ ತಂದಾಗಲೂ...?

ಮಲ್ಲಿಕಾರ್ಜುನ, ಸುರಧೇನುಪುರ

ಭಿನ್ನಾಭಿಪ್ರಾಯ ಇಲ್ಲದ ದಂಪತಿ ಇರಬಹುದೆ?

ಹೂಂ. ಸ್ವಂತ ಅಭಿಪ್ರಾಯವೇ ಇಲ್ಲದ ಪತಿ ಇದ್ದರಾಯ್ತು!

ಪಿ. ಜಯವಂತ ಪೈ, ಕುಂದಾಪುರ

ಹಿತ್ತಾಳೆ ಕಿವಿ ಎಂದರೇನು?

ಅನ್ಯರ ಹಿತ ತಾಳದವರು ಆಡುವ ಮಾತಿಗೆ ಒಗೊಡುವ ಕಿವಿ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಚುರುಕಾದ ಉತ್ತರಗಳನ್ನು ನೀಡಲು ಯಾವ ಚೂರ್ಣ ಸೇವಿಸುತ್ತೀರಿ? ಅದು ಎಲ್ಲಿ ಸಿಗುತ್ತೆ?

ವಿಡಂಬನ ಪ್ರಚೋದನ ಚೂರ್ಣ; ಅದು ಭಾಷೆಯ ಪದರಗಳಲ್ಲಿ ಅಡಗಿರುತ್ತದೆ.

■ ರಾಮ್